ಎಂದು ಉಗ್ಗಡಿಸಿದ ಕುವೆಂಪು ವಾಣಿ ನಮಗೆ ಎಲ್ಲಾ ಕಾಲಕ್ಕೂ ಮಾದರಿ! ನವೆಂಬರ್ ಒಂದು ರಾಜ್ಯೋತ್ಸವದ ದಿನ ನಾವೆಲ್ಲ ಕಿವಿಯಲ್ಲಿ ಗಾಳಿ ಹೊಕ್ಕ ಕರುಗಳಂತೆ ಆಗ ಜಿಗಿದಾಡಿದ್ದು ನಿಜ.

ಏನಿದ್ದರೂ ಒಂದು ಕಾಲದಲ್ಲಿ ಮೈಸೂರು ಎಂದರೆ ನಮಗೆ ಆರೇಳು ನೂರು ಕಿಲೋಮೀಟರ್ ದೂರದ ಪ್ರವಾಸೀ ತಾಣ. ಅಲ್ಲಿನ ಆ ದೊಡ್ಡ ಅರಮನೆ, ಝೂ ಪ್ರಾಣಿಗಳು, ಕನ್ನಂಬಾಡಿ ಕಟ್ಟೆ, ಚಾಮುಂಡಿ ಬೆಟ್ಟಗಳಷ್ಟೇ ನಮ್ಮ ಕಲ್ಪನೆಗೆ ಎಟಕುತ್ತಿದ್ದವು. ಹೀಗಾಗಿಯೇ ಸಮಗ್ರ ಕರ್ನಾಟಕ ಎಂದಾಗ ಕುಣಿದಾಡಿದ್ದು ನಾವು. ಎಷ್ಟೇ ಆದರೂ, ಹಳೇ ಮೈಸೂರು ಸೀಮೆಯಲ್ಲಿನ ಜನ ದೊರೆಗಳ ಆಳ್ವಿಕೆಯಲ್ಲಿ ಸುಖ ಸಮೃದ್ಧಿ ಕಂಡ- ರಾಜಸೇವಾಸಕ್ತರೆಂಬ ಭಾವನೆ ನನ್ನೊಳಗೆ ಮನೆ ಮಾಡಿತ್ತು.

ಸದರಿ ಎಪ್ಪತ್ತರ ದಶಕವೆಂದರೆ ಕರ್ನಾಟಕದ ಪಾಲಿಗೆ ಮಹತ್ವದ ಕಾಲಘಟ್ಟ. ದೇವರಾಜ ಅರಸು ಅವರ ಆಳ್ವಿಕೆಯಲ್ಲಿ ಸಾಮಾಜಿಕ ನ್ಯಾಯಕ್ಕೆ ತಳಪಾಯ ಬಿದ್ದದ್ದು. ಬಸವಲಿಂಗಪ್ಪನವರ 'ಬೂಸಾ ಚಳುವಳಿ' ಭಯಂಕರ ಸದ್ದು ಮಾಡಿದ್ದು. ಅದು ಕನ್ನಡ ಸಾಹಿತ್ಯ ಚರಿತ್ರೆಯ ದಿಕ್ಕನ್ನೇ ಬದಲಿಸುವಂತಾದದ್ದು. ಅದೇ ಆಗ ಪೆನ್ನು ಹಿಡಿದ ನನಗೆ ಅಚ್ಚರಿಯೋ ಅಚ್ಚರಿ. ಆಗ ಕುಂತಲ್ಲಿ ನಿಂತಲ್ಲಿ ಅದೇ ಚರ್ಚೆ. ಆವಾಗಲೇ ರಾಜ್ಯದಲ್ಲಿ ದಲಿತ ಸಂಘರ್ಷ ಸಮಿತಿಯ ಹುಟ್ಟು. ಒಂದೇ ಎರಡೇ!

* * *

ಮತ್ತೆ ಹತ್ತು ವರ್ಷ ಕಳೆದು ಎಂಬತ್ತೂರರಲ್ಲಿ ಕೆಲಸದ ಮೇಲೆ ಅನಾಯಾಸ ಬೆಂಗಳೂರಿನ ಹೊಟ್ಟೆಗೆ ಬಿದ್ದ ಹೊಸತರಲ್ಲಿ, ಚಾಮರಾಜ ಪೇಟೆಯ ಈದ್ಗಾ ಮೈದಾನಕ್ಕೆ ಹತ್ತಿರದ ಎರಡನೇ ಮೇನ್ ರಸ್ತೆಯಲ್ಲಿ ಹಳೆಯ ಮನೆಯೊಂದರ ಬಾಡಿಗೆ ಮನೆಯಲ್ಲಿದ್ದ ನನ್ನೂರಿನ ಗೆಳೆಯನ ಮನೆಯಲ್ಲಿ ತತ್ಕಾಲದ ವಾಸ. ಹಿತ್ತಲ ಗೋಡೆಗೆ ಲಗತ್ತಾಗಿದ್ದ ಪಾಯಖಾನೆಯಲ್ಲಿ ಕೆಳಗೆ ತಗಡಿನ ಡಬ್ಬವೂ ಒಂದು ಕಿಂಡಿಯೂ ಕಣ್ಣಿಗೆ ಬಿತ್ತು. ಸಫಾಯಿ ಕರ್ಮಚಾರಿಗಳಿಗೋಸ್ಕರವೇ ಬಿಟ್ಟಿದ್ದ ಸಣ್ಣ ರಸ್ತೆಯಂತೆ ಅದು(Scavenger's lane). ಕೆಟ್ಟ ಕುತೂಹಲ ಮೂಡಿಸಿತ್ತು. ಸದ್ಯ ಇತ್ತೀಚೆಗಷ್ಟೇ ನಿಷೇಧಿಸಲಾಗಿದ್ದ ಮಾನವ ಮಲ ಹೊರುವ ಪದ್ಧತಿಯ ಸಾಕ್ಷಾತ್ ದರ್ಶನವಾಗಿಸಿತ್ತು, ನನಗೆ! ಅಮಾಯಕರು ತಲೆಯ ಮೇಲೆ ಮಲ ಹೊರುವ ಪದ್ಧತಿಯನ್ನು ನಿಷೇಧಿಸಿದ್ದರೂ ಅದರ ಪಳೆಯುಳಿಕೆ ಇನ್ನೂ ಉಳಿದಿತ್ತು.

ಉತ್ತರ ಕರ್ನಾಟಕದಲ್ಲಿ ಮಲ ವಿಸರ್ಜನೆಗೆ ಹೊರಗಡೆ ಹೋಗುತ್ತಿದ್ದ ಬಯಲ ಸೀಮೆಯ ನನಗೆ ಇದು ಅಪರಿಚಿತ ಲೋಕ. ಎಷ್ಟೇ ಆದರೂ, ನಮ್ಮ ಬಾಲ್ಯದ ದಿನಗಳಲ್ಲಿ ದೂರದ ಬೆಂಗಳೂರಿಗೆ ಯಾರಾದರೂ ಹೊರಟು ನಿಂತಿದ್ದಾರೆಂದರೆ ಅವರನ್ನು ವಿದೇಶಕ್ಕೆ ಹೊರಟವರನ್ನು ನೋಡುವಂತೆಯೆ ನಿಂತು ನೋಡುತ್ತಿದ್ದೆವೆನ್ನಿರಿ. ಅದೇ ಕುತೂಹಲದ ಕ್ಯಾಮೆರಾ ಕಣ್ಣಲ್ಲಿ ಈ ರಾಕ್ಷಸ ನಗರದ ಗಲ್ಲಿ ಗಟಾರಗಳನ್ನೂ ಬಿಡದೇ ನೋಡುತ್ತಾ ನಿಂತವನು.

ಪಾರಂಪರಿಕ ತಲೆಮಾರಿನಿಂದ ತಲೆಮಾರಿಗೆ ಬಂದ ಮನೆತನದ ಹೆಸರು ಕಂಬಳಿಯನ್ನು ಹೆಗಲಿಗೆ ಹೊದ್ದೇ ಈ ಬೆಂಗಳೂರಿನ ತೆಕ್ಕೆಗೆ ಬಂದು ಬಿದ್ದುದಕ್ಕೆ ಈಗಲೂ ಹೆಮ್ಮೆಪಡುತ್ತೇನೆ. ಕಂಬಳಿ ನನಗೆ ವೇದಿಕೆಯಲ್ಲಿ ಹೊದಿಸುವ ದೇಶೀ ಶಾಲಿನಂತೆ! ಈ ಎಲ್ಲ ಹಿನ್ನೆಲೆಯಲ್ಲಿ, 1973ರ ಆ ನವೆಂಬರ್ ಒಂದು ಎಂದರೆ ನನಗೆ ಮರೆಯಲಾಗದ ಅನುಭವ! ಆದರೇನು, ಇತ್ತೀಚೆಗೆ ರಾಕ್ಷಸ ನಗರಿಯಾಗಿ ಬಡಾಯಿಸುತ್ತಿರುವ ಬೆಂಗಳೂರಿನ ಹೊಟ್ಟೆಯಲ್ಲಿ ಯಾವನಾದರೂ ತಲೆತಿರುಕ ‘ಡೂ ಯು ಬಿಲಾಂಗ್ ಟೂ...?’ ಎಂದು ನಾಜೂಕಾಗಿ ಜಾತಿಯನ್ನು ಕೇಳಿದಾಗ ಕಸಿವಿಸಿಯಾಗುತ್ತದೆ! ನಾನೂ ಅಷ್ಟೇ ನಯವಾಗಿ ಉತ್ತರಿಸಿ ಕೈತೊಳೆದುಕೊಳ್ಳುತ್ತೇನೆ.

* * *

ಬಾಲ್ಯದ ಪಡಸಾಲೆಯಲ್ಲಿ ಸ್ಥಾಪಿಸಲಾಗಿದ್ದ ಆ ಬೀಸುವ ಕಲ್ಲುಗಳ ನೆನಪಾಯಿತು-

ಕಲ್ಲ ಕೊಟ್ಟವ್ಗೆ ಎಲ್ಲ ಭಾಗ್ಯವು ಬರಲಿ
ಪಲ್ಲಕ್ಕಿ ಮ್ಯಾಲೆ ಮಗ ಬರಲಿ, ಮನಿಯಾಗ

